**every man's needs, but not every man's greed.'** ಈ ಮಾತಿನ ಹಿನ್ನೆಲೆಯಲ್ಲಿ ಪ್ರತಿನಿತ್ಯದ ಊಟಕ್ಕೆ ಬೇಕಾದಷ್ಟು ಬೇಟೆ – ಅಥವಾ ಹಣ್ಣು–ಕಾಯಿ–ಗೆಡ್ಡೆ ಗೆಣಸು ತಂದು, ತಿಂದು ತೃಪ್ತರಾಗಬಹುದು. ಹಾಗೆ ತೃಪ್ತಿಯಲ್ಲಿರುವ ಸಮಾಜಕ್ಕೆ ಯಾವುದೇ ವಸ್ತುವನ್ನು ಸಂಗ್ರಹ ಮಾಡಿ ಕಾಪಿಡಬೇಕಾದ ತುರ್ತಿರುವುದಿಲ್ಲ. ಎಷ್ಟು ಬೇಕೋ ಅಷ್ಟು, ಯಾವಾಗ ಬೇಕೋ ಆಗ ನೈಸರ್ಗಿಕ ಸಂಪನ್ಮೂಲಗಳಿಂದ ಪಡೆದು ಜೀವಿಸಬಹುದು. ಹೀಗಿರುವ ಸಮಾಜದ ನಿರ್ಮಿತಿಯಲ್ಲಿ, ಆಹಾರವನ್ನು ಕೈವಶ ಮಾಡಿಕೊಳ್ಳಲಾಗದ ಮಕ್ಕಳು ಮತ್ತು ವೃದ್ಧರ ಗತಿಯೇನು? ಅಥವಾ ಒಂದು ದಿನ ಯಾವುದೇ ಬೇಟೆಗೆ ಅಥವಾ ಸಂಗ್ರಹಕ್ಕೆ ಹೋಗಲು ಸಾಧ್ಯವಾಗದ ಪರಿಸ್ಥಿತಿ ಉಂಟಾದಾಗ ಏನಾಗಬಹುದು? ಈ ಪ್ರಶ್ನೆಗಳು ಸಹಜವೇ. ಬಹುಶಃ ಸಮಾಜ ನಮ್ಮನ್ನು ನೋಡಿಕೊಳ್ಳುತ್ತದೆ ಎನ್ನುವ ನಂಬಿಕೆಯೇ ಈ ಆಲೋಚನೆಯ ಹಿನ್ನೆಲೆಯಲ್ಲಿರಬಹುದು. ಹೀಗಾಗಿಯೇ ಇಂಥ ಸಮಾಜದ ನಿರ್ಮಿತಿಯ ಬಗ್ಗೆ ನಾವು ಅರಿಯಬೇಕು.

ಇದನ್ನು ಸುಜ್‌ಮನ್ ಮತ್ತು ನ್ಯೂರಿಟ್ ಬರ್ಡ್ ತಮ್ಮ ಬರವಣಿಗೆಯ ಮೂಲಕ ವಿವರಿಸಿ ಹೇಳುತ್ತಾರೆ. ನ್ಯೂರಿಟ್ ಬರ್ಡ್ ಇದನ್ನು 'ಕೊಡುಗೆಯ ಸಂಸ್ಕೃತಿ' ಎನ್ನುತ್ತಾರೆ. ಈ ಸಂದರ್ಭವನ್ನು ಊಹಿಸಿ: ಒಂದು ಕುಟುಂಬದ ಇಬ್ಬರು ಕಾಡಿಗೆ ಹೋಗಿ ಅಂದಿನ ಬೇಟೆಯನ್ನು ಹೊತ್ತು ತಂದಿದ್ದಾರೆ. ಅದನ್ನು ಅಂದು ಅಥವಾ ಕೆಲವೇ ದಿನಗಳಲ್ಲಿ ಸೇವಿಸಬೇಕು. ಆದರೆ, ಅದರಲ್ಲಿರುವ ಒಟ್ಟಾರೆ ಮಾಂಸ ಮೂರು ಸಂಸಾರಗಳಿಗಾಗುವಷ್ಟಿದ್ದು, ಅದನ್ನು ಕಾಪಿಡಲು ಸಾಧ್ಯವಿಲ್ಲದ ಪರಿಸ್ಥಿತಿಯಿದೆ. ಅದನ್ನು ಸಂಸ್ಕರಿಸುವ ಅಥಾವಾ ಜೋಪಾನವಾಗಿ ಹಳಸದಂತೆ ಇಡುವ ತಂತ್ರಜ್ಞಾನವಿಲ್ಲ. ಈ ಸಂದರ್ಭದಲ್ಲಿ ಅಕ್ಕಪಕ್ಕದವರೊಂದಿಗೆ ಹಂಚಿ ತಿನ್ನುವುದು ಸಹಜವೇ ಆಗಿರುತ್ತದೆ. ಹೀಗೆ ಯಾರೇ ಬೇಟೆಗೆ ಹೋದರೂ ವಾಪಸ್ಸಾಗಿ ಹಂಚಿತಿನ್ನುವ ಪರಿಪಾಠವಿದ್ದರೆ ಯಾವುದನ್ನೂ ಸಂಗ್ರಹಿಸಿಡುವ ಗೊಡವೆಯಿರುವುದಿಲ್ಲ. ವೃದ್ಧರೂ ಮಕ್ಕಳೂ ಹಂಚಿಕೆಯ ಭಾಗವಾಗಿ ಇದ್ದುಬಿಡುತ್ತಾರೆ. ದಿನನಿತ್ಯದ ಅವಶ್ಯಕತೆಗಳಿಗೆ ಎಷ್ಟು ಬೇಕೋ ಅಷ್ಟು ಹೆಕ್ಕಿ ತರುವುದರಿಂದ ಮತ್ತು ಹಂಚಿಕೊಳ್ಳುವುದರಿಂದ ಯಾವುದನ್ನೂ ಸಂಗ್ರಹಿಸಬೇಕೆನ್ನುವ ತುರ್ತು ಇರುವುದೇ ಇಲ್ಲ. ಈ ಮಾತನ್ನು ನಾವು ಇಲ್ಲಿಂದ ಮುಂದಕ್ಕೆ ವಿಸ್ತರಿಸಿದಾಗ ಸಂಗ್ರಹವೂ ಮತ್ತು ಅದರೊಂದಿಗೆ ಬರುವ ಶ್ರೀಮಂತಿಕೆಯೂ, ಹಾಗೂ ವಸ್ತುಗಳ ಮೇಲೆ ಚಲಾಯಿಸುವ ಹಕ್ಕು ಎಲ್ಲವೂ ನಮ್ಮನ್ನು ಆಧುನಿಕತೆಯತ್ತ ಒಯ್ಯುತ್ತದೆ. ಬೇಟೆಯಾಡುವವರು ಅಂದಿನ ಬೇಟೆಯನ್ನು ಬೇಯಿಸಿ ತಿನ್ನುವುದಷ್ಟೇ ಆದರೆ, ಕೃಷಿಕರು ಬೀಜ ಬಿತ್ತಿ, ಫಸಲನ್ನು ಕಟಾವು ಮಾಡಿ, ಪರಿಷ್ಕರಣೆ ಮಾಡಿದ ನಂತರವೇ ಬೇಯಿಸಿ ತಿನ್ನಲು ಸಾಧ್ಯ. ಹಾಗೂ ಕೃಷಿಯ ಪ್ರಕ್ರಿಯೆ ಬೇಟೆಗಿಂತ ದೀರ್ಘವಾದದ್ದರಿಂದ, ದಾಸ್ತಾನು ಹಕ್ಕಿನ ಮಾತುಗಳು ಬರುತ್ತವೆ. ಅದರೊಂದಿಗೇ ಆರ್ಥಿಕ ವಿನಿಮಯದ ಮಾತೂ ಬರುತ್ತದೆ. ಕಾಡಿನಿಂದ ನಾಡಿಗೆ ಬರುತ್ತಿದ್ದಂತೆ – ಹಂಚಿಕೊಳ್ಳುವುದು ಹಿಂದಕ್ಕೆ ಬಿದ್ದು ವ್ಯಾಪಾರವು ಮುಖ್ಯವಾಗುತ್ತದೆ. ವ್ಯಾಪಾರದಲ್ಲಿ ದುಡ್ಡು ಎನ್ನುವ ಮಾಧ್ಯಮ ಸಿಕ್ಕು, ಅದನ್ನು ಸಂಗ್ರಹಿಸಿಡುವುದು ಸರಳವಾದಾಗ ನಾವು ಸಂಪೂರ್ಣವಾಗಿ ಆಧುನಿಕ ಆರ್ಥಿಕ ಜಗತ್ತಿಗೆ ಕಾಲಿಟ್ಟಿದ್ದೇವೆ ಎನ್ನಬಹುದು.

ನಮೀಬಿಯಾದ ಬುಡಕಟ್ಟು ಜನಾಂಗದವರು ನಿಸರ್ಗದೊಂದಿಗೆ ಹೇಗೆ ಬೆರೆತು ಇರುತ್ತಾರೆ ಎನ್ನುವುದಕ್ಕೆ ಸುಜ್‌ಮನ್ ಕೆಲವು ಗಮ್ಮತ್ತಿನ ಉದಾಹರಣೆಗಳನ್ನು ಕೊಡುತ್ತಾರೆ. ಆನೆಯನ್ನು ಬೇಟೆಯಾಡಿ ತಿನ್ನುವುದು ಸಾಧ್ಯವಿದ್ದರೂ, ಅದು ಗಿಟ್ಟುವ ಮಾತಲ್ಲ. ಯಾಕೆಂದರೆ, ಆನೆಯ ಗಾತ್ರಕ್ಕೆ ಅದರ ಚರ್ಮ ಸುಲಿದು ಮಾಂಸ ತೆಗೆದು ತಿನ್ನುವುದು ಕಠಿಣವಷ್ಟೇ ಅಲ್ಲ. ಆ ಮಾಂಸ ಅವಶ್ಯಕತೆಗಿಂತ ಹೆಚ್ಚಾಗಿರುತ್ತದೆ. ಹಾಗೆಂದು ಆನೆಯ ಬೇಟೆ ನಡೆಯುವುದಿಲ್ಲವೆಂದೇನೂ ಅಲ್ಲ. ನಮೀಬಿಯಾದ ಆ ಪ್ರಾಂತದಲ್ಲಿ ಹೊರಗಿನಿಂದ ಬರುವವರು ಒಂದು ಶುಲ್ಕ ತೆತ್ತು ಮೊದಲೇ